ಇಂದು ದಿಃ**31-07-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಟಿ.ಪಿ.ಎಂ ವಕೀಲರಿಂದ ವಾದಿಯ ಪರಃ**

ಈ ದಿನ ನ್ಯಾಯಾಲಯಕ್ಕೆ ಯಾರ ಜೊತೆಗೆ ಬಂದಿರುತ್ತೀರಿ ಎಂದರೆ ಸಾಕ್ಷಿ ನಾನು ಬಂದಿರುತ್ತೇನೆ ಎಂದು ಹೇಳುತ್ತಾರೆ. ನಾನು ಮತ್ತು ಶಿವಮೂರ್ತಯ್ಯ ಕೂಡಿ ಬಂದಿರುತ್ತೇವೆ. 3 ನೇ ಪ್ರತಿವಾದಿಯ ಪರಿಚಯ ಇರುವುದಿಲ್ಲ. 3 ನೇ ಪ್ರತಿವಾದಿಯ ಮದುವೆ ನಂದಿಗುಡಿಯಲ್ಲಿ ಆಗಿರುತ್ತದೆ. 3 ನೇ ಪ್ರತಿವಾದಿಯ ಹೆಂಡತಿ ನನ್ನ ಸಂಬಂಧಿ ಎಂದರೆ ಸರಿಯಲ್ಲ. ನಾನು ಮತ್ತು 3 ನೇ ಪ್ರತಿವಾದಿ ಒಂದೇ ಸಮುದಾಯಕ್ಕೆ ಸೇರಿದವರು ಎಂದರೆ ಸರಿ. ಸಾಕ್ಷಿ ಆದರೆ ಸಂಬಂಧಿಕರಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಮಗಳು ಈ ದಾವೆ ಮಾಡಿದ್ದಾಳೆ. 1 ನೇ ಪ್ರತಿವಾದಿಯ ಮಗಳ ಹೆಸರು ಸುಜಾತ ಎಂದು ಇರಬಹುದು ಮತ್ತು ಯಾರು ಈ ದಾವೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ಏನು ಪರಿಹಾರ ಕೇಳಿ ಈ ದಾವೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ವಾದಿಯರು ಈ ದಾವೆಯನ್ನು ಯಾಕೆ ಮಾಡಿದ್ದಾರೆ ಎಂದು ಗೊತ್ತಿಲ್ಲ.

ನಾನು 10 ನೇ ತರಗತಿಯವರೆಗೆ ಶಾಲೆ ಕಲಿತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಅಂಶಗಳ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನನಗೆ ಆಂಗ್ಲ ಭಾಷೆ ಬರುವುದಿಲ್ಲ. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ಓದಿ ತಿಳಿದುಕೊಂಡಿಲ್ಲ, ಸಾಕ್ಷಿ ಆದರೆ ನಾನೇ ಹೇಳಿ ಬರೆಯಿಸಿದ್ದು ಎಂದು ಹೇಳುತ್ತಾರೆ. ಈ ದಾವೆ ಯಾವ ಆಸ್ತಿಯ ಬಗ್ಗೆ ನಡೆಯುತ್ತಿದೆ ಎಂದು ಮಾಹಿತಿ ಇದೆ. ಸರ್ವೆ ನಂಬರ್ 43/2 ಪಿಪಿ1 ಬಗ್ಗೆ ಈ ದಾವೆ ಇದೆ. 1 ನೇ ಪ್ರತಿವಾದಿಯ ಪರಿಚಯ

ನನಗೆ ಬಹಳ ದಿನಗಳಿಂದ ಇದೆ. ಆತನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಮಾಹಿತಿ ಇದೆ. ಆತನಿಗೆ 3 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇರುತ್ತಾರೆ. ಶೆಡ್ಯೂಲ್ ಎ ಆಸ್ತಿಯ ಕುರಿತು ವ್ಯವಹಾರ ಮೊದಲ ಬಾರಿಗೆ ಆಗಬೇಕಾದರೆ ನಾನು ಹಾಜರು ಇದ್ದೇನು. ದಿನಾಂಕಃ29-11-2002 ರಂದು ವ್ಯವಹಾರ ಆಗಿದೆ. ಅದಕ್ಕಿಂತ ಮೊದಲು ಕ್ರಯದ ಮಾತುಕತೆ ಒಂದು ಬಾರಿ ಆಗಿತ್ತು. ಆಗ ನಾನು ಇದ್ದೇನು. ಯಾವ ದಿನಾಂಕದಂದು ಮಾತುಕತೆ ಆಯಿತು ಎಂದು ನನಗೆ ದಿನಾಂಕ ನೆನಪಿಲ್ಲ. ಆ ದಿನ ನಾನು ಹಾಜರು ಇರದೇ ಇದ್ದ ಕಾರಣ, ದಿನಾಂಕ ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ.

ಶೆಡ್ಯೂಲ್ ಎ ಆಸ್ತಿ ಕುರಿತು ಪ್ರತಿ ಎಕರೆಗೆ ರೂ.1 ಲಕ್ಷ 60 ಸಾವಿರ ನಿಗದಿ ಆಗಿತ್ತು. ಈ ಕುರಿತು ಕ್ರಯದ ಕರಾರು ಪತ್ರದಲ್ಲಿ ಬರೆದಿರುವುದಿಲ್ಲ. ಪ್ರತಿ ಎಕರೆಗೆ ರೂ.1 ಲಕ್ಷ 60 ಸಾವಿರ ಎಂದು ನಿಗದಿ ಆಗಿರಲಿಲ್ಲ ಎಂದರೆ ಸರಿಯಲ್ಲ, ನಾನು ಈ ಕುರಿತು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರದ ದಿನಾಂಕ ನನಗೆ ನೆನಪಿಲ್ಲ. ಕ್ರಯದ ಕರಾರು ಪತ್ರದ ಮೊದಲು ರೂ.1 ಲಕ್ಷ 3 ನೇ ಪ್ರತಿವಾದಿ ಕೊಟ್ಟಿದ್ದನು, ನಂತರ 1 ನೇ ಪ್ರತಿವಾದಿ ಪುನಃ ಕರಾರು ಪತ್ರ ಆದ ನಂತರ ರೂ.1 ಲಕ್ಷ ಬೇಕು ಎಂದು ತೆಗೆದುಕೊಂಡಿದ್ದನು. ರೂ.1 ಲಕ್ಷ ಹೆಚ್ಚಿಗೆ ಕೊಟ್ಟ ಬಗ್ಗೆ ದಾಖಲಾತಿ ಪಡೆದುಕೊಂಡಿಲ್ಲ. ಯಾವುದೇ ರೂ.1 ಲಕ್ಷ ಹೆಚ್ಚಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವ ಮಗಳ ಮದುವೆಗೆಂದು ನನಗೆ ಹೆಸರು ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ 1 ನೇ ವಾದಿಯ ಮದುವೆ ಇತ್ತು ಎಂದರೆ ಸಾಕ್ಷಿ ಆಕೆಯ ಮದುವೆ ಆಗಲೇ ಆಗಿತ್ತು ಎಂದು ಹೇಳುತ್ತಾರೆ. ವಾದಿಯರು ಆ ಸಮಯದಲ್ಲಿ ವಯಸ್ಕರರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಗದು ರೂಪದಲ್ಲಿ ಕ್ರಯದ ಕರಾರಿನ ಸಮಯದಲ್ಲಿ ಮುಂಗಡ ಹಣಕೊಟ್ಟಿರುತ್ತಾರೆ.

ಮಲ್ಲಿಕಾರ್ಜುನಪ್ಪ ಎಂಬ ಬರಹಗಾರರು ಕ್ರಯಪತ್ರ ತಯಾರು ಮಾಡಿದರು. ಎಷ್ಟು ಬೆಲೆಯ ಸ್ಟಾಂಪ್ ಪೇಪರ್ ಇತ್ತು ಎಂದು ಗೊತ್ತಿಲ್ಲ. ಆ ಸಮಯದಲ್ಲಿ ಯಾರಾರು ಇದ್ದರು ಎಂದು ಮಾಹಿತಿ ಇದೆ. 1 ನೇ ಪ್ರತಿವಾದಿ, 3 ನೇ ಪ್ರತಿವಾದಿ, ಎಂ.ವೀರಯ್ಯ ಮತ್ತು ನಾನು ಇದ್ದೇವು. ಕ್ರಯದ ಕರಾರು ಪತ್ರಕ್ಕೆ ಎಂ.ವೀರಯ್ಯ ಮತ್ತು ನಾನು ಸಹಿ ಮಾಡಿದೇವು. 1 ಮತ್ತು 3 ನೇ ಪ್ರತಿವಾದಿಯರು ಸಹಿ ಮಾಡಿದರು.

ಶೆಡ್ಯೂಲ್ ಎ ಆಸ್ತಿಯಲ್ಲಿ ವಾದಿಯರಿಗೂ ಪಾಲು ಇದೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನನಗೆ ಸಾಕ್ಷಿ ಹೇಳಲು ನೋಟೀಸ್ ಬಂದಿಲ್ಲ. ನಾನು ನ್ಯಾಯಾಲಯಕ್ಕೆ 3 ನೇ ಪ್ರತಿವಾದಿಯ ಜೊತೆಗೆ ಬಂದಿದ್ದರೂ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಎ ಆಸ್ತಿ 1 ನೇ ಪ್ರತಿವಾದಿಯ ತಂದೆಯ ಆಸ್ತಿ ಇರುತ್ತದೆ. 1 ನೇ ಪ್ರತಿವಾದಿಗೆ ಈ ಆಸ್ತಿ ಪಿತ್ರಾರ್ಜಿತವಾಗಿ ಬಂದಿತ್ತು ಎಂದರೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಇದ್ದರೂ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಮಾಹಿತಿ ಇಲ್ಲದೇ ಇದ್ದರೂ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ, ಹರಿಹರ.